**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ**
**ಚನ್ನರಾಯಪಟ್ಟಣ**

C.C.NO.443/2017

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಎಸ್ ಪಿ ಐಂಗಾರ್ | C.W – 1 |
| **ತಂದೆಯ ಹೆಸರು** | ಃ | ಹೆಚ್ ಎಸ್ ಸಂಪತ್ ಐಂಗಾರ್ | P.W – 1 |
| **ವಯಸ್ಸು** | ಃ | **59** ವರ್ಷ | |
| **ಉದ್ಯೋಗ** | ಃ | ನಿವೃತ್ತ ನೌಕರ | **ಪ್ರಮಾಣ ವಚನ ಬೋಧಿಸಲಾಯಿತು** |
| **ವಾಸ** | ಃ | ಬೆಂಗಳೂರು | **ದಿನಾಂಕಃ 09**-12-2019 |

---

**<u>ಮುಖ್ಯ ವಿಚಾರಣೆ</u> ಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ಮೃತ ದ್ವಾರಕಾನಾಥ ನನ್ನ ಅಣ್ಣ . ನನ್ನ ಅಣ್ಣ ಸತ್ಯ ನಿಕೇತನ ವಿದ್ಯಾ ಕೇಂದ್ರದಲ್ಲಿ ಅಧ್ಯಕ್ಷರಾಗಿ ಸೇವೆ ಮಾಡುತ್ತಿದ್ದು ಅಪಘಾತಕ್ಕಿಂತ ಎರಡುದಿನ ಮುಂಚೆ ಚಿಕ್ಕಬಳ್ಳಾಪುರಕ್ಕೆ ಹೋಗಿದ್ದು ಅಲ್ಲಿಂದ ದಿನಾಂಕ 12-10-2016 ರಂದು ಸಂಜೆ 4 ಗಂಟೆ ಸಮಯದಲ್ಲಿ ಚಿಕ್ಕಬಳ್ಳಾಪುರದಿಂದ ಬೇಲೂರಿಗೆ ಶಂಕರಶೆಟ್ಟಿಗಾರ್ ಮತ್ತು ನನ್ನ ಅಣ್ಣ ಮಾರುತಿ 800 ಕಾರಿನಲ್ಲಿ ಬರುತ್ತಿದ್ದಾಗ ಚನ್ನರಾಯಪಟ್ಟಣ ದ ನುಗ್ಗೇಹಳ್ಳಿ ಜಂಕ್ಷನ್ ಚಿಕ್ಕಗೊಂಡನಹಳ್ಳಿ ಹತ್ತಿರ ಎನ್ ಹೆಚ್ ರಸ್ತೆಯಲ್ಲಿ ರಾತ್ರಿ 8 ಗಂಟೆ ಸಮಯದಲ್ಲಿ ಎದುರುಗಡೆಯಿಂದ ಒಂದು ಟಾಟಾ ಇಂಡಿಕಾ ಕಾರ್ ನ್ನು ಚಾಲಕ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಡಿಕ್ಕಿಪಡಿಸಿರುವುದಾಗಿ ತಿಳಿದುಬಂತು. ಆಗ ದಾರಿಯಲ್ಲಿ ಹೋಗುತ್ತಿದ್ದ ನಾಗೇಶ ಎಂಬ ವ್ಯಕ್ತಿ ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ನನ್ನ ಅಣ್ಣ ಮತ್ತು ಶೆಟ್ಟಿಗಾರ್ ರವರನ್ನು ಆಸ್ಪತ್ರೆಗೆ ಕರೆತಂದಿರುತ್ತಾರೆ . ನನ್ನ ಅಣ್ಣನಿಗೆ ಪ್ರಜ್ಞೆ ಇರಲಿಲ್ಲ ಚಿಕಿತ್ಸೆ ಫಲಕಾರಿಯಾಗದೇಮೃತಪಟ್ಟಿರುತ್ತಾರೆ . ನಂತರ ಚಾಸಾ-8 ರವರು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಜನಪ್ರಿಯ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಮೇಲ್ಕಂಡ ವಿಚಾರಗಳನ್ನು ನಮ್ಮ ಅಣ್ಣನ

ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದ ಕೃಷ್ಣ ಎಂಬ ವ್ಯಕ್ತಿ ನನ್ನ ಅಣ್ಣ ರಾಮಪ್ರಸಾದ್ ರವರಿಗೆ ತಿಳಿಸಿರುತ್ತಾರೆ . ನಂತರ ನನ್ನ ಅಣ್ಣ ದೂರವಾಣಿ ಮುಖಾಂತರ ವಿಚಾರತಿಳಿಸಿರುತ್ತಾರೆ . ನಂತರ ನಾನು ಆಸ್ಪತ್ರೆಯಲ್ಲಿ ನನ್ನ ಅಣ್ಣನನ್ನು ನೋಡಿ ಠಾಣೆಗೆ ದೂರನ್ನು ನೀಡಿರುತ್ತೇನೆ . ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದುಗುರುತಿಸಲಾಯಿತು .

**ಪಾಟೀ ಸವಾಲುಃ- ಈ ಹಂತರದಲ್ಲಿ ಆರೋಪಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

ಮರು ವಿಚಾರಣೆ ಃ- ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ